ವಿಜಯವಾಣಿ e-Paper

# ಬೆಂಗ್ಳೂರು ಬೆಂಗಾಡಾದೀತು!

## ■ ಐಐಎಸ್‌ಸಿ ವಿಜ್ಞಾನಿಗಳ ಎಚ್ಚರಿಕೆ ■ ಕೆರೆಗಳ ಅಧ್ಯಯನ ವರದಿ ಸಿದ್ಧ

■ ಎಸ್. ರವಿಪ್ರಕಾಶ್

**ಬೆಂಗಳೂರು:** ಉದ್ಯಾನನಗರಿ ಬೆಂಗಳೂರಿನ ಬಗ್ಗೆ ಸರ್ಕಾರ, ಸಾರ್ವಜನಿಕರು ಇದೇ ನಿರ್ಲಕ್ಷ್ಯ ಮುಂದುವರಿಸಿದರೆ ಮುಂದೊಂದು ದಿನ ನಗರ 'ಹಾಳು ಕೊಂಪೆ'ಯಾದೀತು. ಜನತೆ ನಗರವನ್ನು ತೊರೆದುಹೋಗಬೇಕಾದ ಅನಿವಾರ್ಯ ಸ್ಥಿತಿ ಉದ್ಭವಿಸಲಿದೆ !

ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿಗಳು ಇಂತಹ ಎಚ್ಚರಿಕೆ ನೀಡಿದ್ದಾರೆ. ನಗರದ ಕೆರೆಗಳಲ್ಲಿ ಕಾರ್ಕೋಟಕ ವಿಷ ಸ್ವರೂಪಿ ನೊರೆ ಉಕ್ಕುತ್ತಿರುವುದು, ಬೆಂಕಿ ಉಗುಳುತ್ತಿರುವುದಕ್ಕೆ ಕಾರಣಗಳು ಹಾಗೂ ಪರಿಹಾರಗಳನ್ನು ಅಧ್ಯಯನ ವರದಿಯಲ್ಲಿ ವಿಜ್ಞಾನಿಗಳು ಕೂಲಂಕಷ ವಿಶ್ಲೇಷಣೆ ನಡೆಸಿ ಈ ಎಚ್ಚರಿಕೆ ನೀಡಿದ್ದಾರೆ.

ಎಲ್ಲದಕ್ಕೂ ಸರ್ಕಾರವನ್ನೇ ಹೊಣೆ ಮಾಡುವ ಮುನ್ನ ಬೆಂಗಳೂರಿನ ನಾಗರಿಕರು ಜವಾಬ್ದಾರಿ ಅರಿತುಕೊಳ್ಳಬೇಕು, ಅಭಿವೃದ್ಧಿ ಹೆಸರಲ್ಲಿ ಕೆರೆಗಳ ನಾಶ, ಕಾಲುವೆಗಳ ಒತ್ತುವರಿ, ಕೆರೆಗಳಿಗೆ ಮಾಲಿನ್ಯದ ನೀರು ಹರಿಬಿಡುವುದು ನಿಲ್ಲಿಸಬೇಕು. ಕೆರೆಗಳಲ್ಲಿ ನೊರೆ ಉಕ್ಕುತ್ತಿರುವುದು ಮತ್ತು ಬೆಂಕಿ ಹೊತ್ತಿಕೊಳ್ಳುತ್ತಿರುವುದು ಮಾನವ ನಿರ್ಮಿತ ಅವಘಡ. ಕೆಐಎಡಿಬಿ, ಬಿಡಿಎ, ಬಿಬಿಎಂಪಿ ಮತ್ತಿತರ ಸಂಸ್ಥೆಗಳು ಎಚ್ಚೆತ್ತುಕೊಂಡು ಕಡಿವಾಣ ಹಾಕದಿದ್ದರೆ ನಗರ ಯಾರೂ ರಕ್ಷಿಸಲಾರದ ಸ್ಥಿತಿ ತಲುಪಲಿದೆ. ಕೆರೆ ಒಡಲಿನ ವಿದ್ಯಮಾನಗಳು ಅಪಾಯದ ಮುನ್ಸೂಚನೆ ಎಂದೇ ಪರಿಗಣಿಸಬೇಕು ಎಂದು ಅಧ್ಯಯನ ವರದಿ ನೀಡಿರುವ ಐಐಎಸ್‌ಸಿ ವಿಜ್ಞಾನಿಗಳ ತಂಡದ ಟಿ.ವಿ. ರಾಮಚಂದ್ರ ಎಚ್ಚರಿಸಿದ್ದಾರೆ.

**ನೊರೆ ಮತ್ತು ಬೆಂಕಿಗೆ ಕಾರಣಗಳು:** ಬೆಳ್ಳಂದೂರು ಮತ್ತು ಯಮಲೂರು ಕೆರೆಗಳ ಸುತ್ತಮುತ್ತಲ ಪ್ರದೇಶಗಳಿಂದ ಮಾಲಿನ್ಯಯುಕ್ತ ನೀರು ಮತ್ತು ಕೈಗಾರಿಕಾ ತ್ಯಾಜ್ಯಗಳು ಸಂಸ್ಕರಣೆಗೊಳಪಡದೆ ಅವ್ಯಾಹತವಾಗಿ ಹರಿದು ಬರುತ್ತಿವೆ. ಜಲಮಂಡಳಿ, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಾಗಲಿ ಕರ್ತವ್ಯ ನಿಭಾಯಿಸುತ್ತಿಲ್ಲವಾದ್ದರಿಂದ ಕೆರೆಯ ಒಡಲು ಮಾಲಿನ್ಯಕಾರಕ ಅಂಶಗಳ ಮಟ್ಟವನ್ನು ತಾಳಿಕೊಳ್ಳಬಲ್ಲ ಎಲ್ಲೆಯನ್ನು ಮೀರಿ ಹೋಗಿದೆ.



ಬೆಳ್ಳಂದೂರು ಕೆರೆಯಲ್ಲಿ ನೊರೆ ಉಕ್ಕುತ್ತಿರುವುದು.



### ಅಪಾಯ ಮಟ್ಟ ಮೀರಿದೆ ನಗರ

ಅಧ್ಯಯನದ ಪ್ರಕಾರ, ಬೆಂಗಳೂರು ನಗರದಲ್ಲಿ ಜಲ, ವಾಯು ಮತ್ತು ಭೂಮಿ ಮಾಲಿನ್ಯಗೊಂಡಿವೆ. ಅದಕ್ಕೆ ದಂಡ ತೆರುವ ದಿನಗಳು ಬಂದಿವೆ. ನಗರದ ಬೆಳವಣಿಗೆ ಮಿತಿಮೀರಿ ಹೋಗಿದೆ. ಜನತೆಗೆ ಅಗತ್ಯವಿರುವಷ್ಟು ಕುಡಿಯುವ ನೀರಿನ ಲಭ್ಯತೆ, ಶುದ್ಧ ಗಾಳಿ ಇಲ್ಲ. ಮತ್ತೊಂದು ಕಡೆ ಕೆರೆಗಳು ಮಾಲಿನ್ಯಯುಕ್ತ ನೀರು ಮತ್ತು ಕೆಸರಿನಿಂದ ತುಂಬಿ ಹೋಗಿವೆ, ಇದರಿಂದ ಹಸಿರು ಮನೆ ಅನಿಲದ (ಗ್ರೀನ್ ಹೌಸ್ ಗ್ಯಾಸ್) ಪ್ರಮಾಣವೂ ಅಧಿಕಗೊಂಡಿದೆ. 1973ರಿಂದ 2013ರ ಅವಧಿಯಲ್ಲಿ ನಗರದಲ್ಲಿ ಕಟ್ಟಡ ನಿರ್ಮಾಣದ ಪ್ರದೇಶ (ಬಿಲ್ಟ್ ಅಪ್ ಏರಿಯಾ) ಶೇ. 925 ಏರಿಕೆಯಾಗಿದೆ. ಶೇ. 79 ಕೆರೆ ಪ್ರದೇಶ ನಾಶವಾಗಿ ಹೋಗಿವೆ. ಇದು ನಿಶ್ಚಿತವಾಗಿಯೂ ಹವಾಮಾನದ ಮತ್ತು ನೀರಿನ ಲಭ್ಯತೆ ಮೇಲೆ ಪರಿಣಾಮ ಬೀರಿದೆ. ಯೋಜನೆ ಇಲ್ಲದೆ ನಗರ ಬೆಳೆಯುತ್ತಿರುವುದು, ಗಾಳಿಯಲ್ಲಿ ಅಧಿಕ ಪ್ರಮಾಣದ ಹಸಿರು ಮನೆ ಅನಿಲ ಸೇರಿಕೊಂಡಿರುವುದು, ಕೆರೆಗಳು ಮತ್ತು ಭೂಮಿಯಲ್ಲಿ ಪೋಷಕಾಂಶ ಮತ್ತು ಭಾರ ಲೋಹಗಳು ಹೆಚ್ಚು ಪ್ರಮಾಣದಲ್ಲಿ ಸೇರಿರುವುದು ಅಪಾಯಕಾರಿ ವಿದ್ಯಮಾನ. ಹಾಗಿದ್ದರೆ ಇದಕ್ಕೆ ಪರಿಹಾರ ಏನು ಎಂಬ ಪ್ರಶ್ನೆಗೆ ರಾಮಚಂದ್ರ ನೀಡುವ ಒಂದೇ ಸಾಲಿನ ಉತ್ತರವೆಂದರೆ, 'ಬೆಂಗಳೂರನ್ನು ದಟ್ಟಣೆ ಮತ್ತು ಮಾಲಿನ್ಯದಿಂದ ಮುಕ್ತಗೊಳಿಸಬೇಕು. ಹೀಗಾದಲ್ಲಿ ಮಾತ್ರ ಮುಂದಿನ ಪೀಳಿಗೆ ನೆಮ್ಮದಿಯಿಂದ ಬದುಕಲು ಸಾಧ್ಯ.'

ಪ್ರಮಾಣದಲ್ಲಿ ಹೆಚ್ಚಿರುವುದು. ಇವು ಕೆರೆ ನೀರಿಗೆ ಶುದ್ಧೀಕರಣಗೊಳ್ಳದೇ ಸೇರುತ್ತಿವೆ. ಬಹುತೇಕ ಪ್ರಮಾಣದ ನೈಟ್ರೋಜನ್ ಕೆರೆಯೊಳಗಿನ ಸಸ್ಯಗಳು ಮತ್ತು ಪಾಚಿಗಳಲ್ಲಿ ಸೇರಿಕೊಳ್ಳುತ್ತದೆ. ಫಾಸ್ಫರಸ್ ಮತ್ತು ಕಾರ್ಬನ್‌ಗಳು ಕೆಸರಿನಲ್ಲಿ ಸೇರಿಕೊಳ್ಳುತ್ತವೆ. ಭಾರಿ ಗಾಳಿ ಬೀಸಿ, ಮಳೆ ಸುರಿಯಲಾರಂಭಿಸಿದಾಗ ಕೆರೆ ನೀರಿನಲ್ಲಿ ಹೊಯ್ದಾಟ, ಮಥನ ನಡೆಯುತ್ತದೆ. ಅಡಿಯಲ್ಲಿದ್ದ ಕೆಸರು ಮೇಲೇಳುತ್ತದೆ. ಪೋಷಕ